S

# ಪ್ರಥಮ ಪಿ.ಯು.ಸಿ. ವಾರ್ಷಿಕ ಪರೀಕ್ಷೆ - 2017

I

## ಕನ್ನಡ - 01

ಸಮಯ : 3.15 ಗಂಟೆ | ಗರಿಷ್ಠ ಅಂಕಗಳು : 100

---

### ಅ-ವಿಭಾಗ

I ಒಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ. 1x10=10

1. ನಗೆಗೆ ಈಡಾಗುವುದು ಯಾವುದು?
2. ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ?
3. ಅಮ್ಮ ಜಗತ್ತಿಗೆ ಎಂಥಹ ಬಟ್ಟೆಯನ್ನು ತೊಡಿಸುವಳು?
4. ನಾಡಿಗೆ ಯಾರ ಕಾಟ ಕೊನೆಗೊಂಡಿದೆ?
5. ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರೇನು?
6. ಮಾಸ್ತರರಿಗೆ ಇನ್ನು ಎಷ್ಟು ವರ್ಷ ಸೇವೆ ಇತ್ತು?
7. ಶಕುಂತಲೆಯ ತಾಯಿಯ ಹೆಸರೇನು?
8. ಕತ್ತಲೆಯ ನಿಜ ಜನಕ ಯಾರು?
9. ಸಾಹ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ.
10. ರಾಜಕುಮಾರಿಗೆ ಬಂದ ರೋಗ ಯಾವುದು?

### ಆ - ವಿಭಾಗ

II (ಅ) ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x4=8

11. ಚೆನ್ನಯ್ಯನ ಗುಪ್ತ ಭಕ್ತಿ ಯಾವ ರೀತಿಯದು?
12. ಶಿಶುಮಕ್ಕಳ ಪ್ರೇಮಕ್ಕೆ ಮಾದಪ್ಪ ಹೇಗೆ ಬಂದನು?
13. ಮಗು ಹಣ್ಣಿನಂಗಡಿಯಂತಾಗಬೇಕಾದುದು ಎಲ್ಲಿ?
14. ಹೊಟ್ಟೆಯೊಳಗಿನ ಮಗುವು ಯಾವ ವರವನ್ನು ಬೇಡುತ್ತಿದೆ?
15. ದಿಕ್ಕು ಬಂದ ಕಡೆಗೆ ನಡೆದ ಕವಿಗೆ ಆದ ಅನುಭವವೇನು?

(ಆ) ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6

16. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ?
17. ಮಹಾನ್ ವ್ಯಕ್ತಿಗಳ ದರ್ಶನ ಅರ್ಥವಾಗುವುದು ಹೇಗೆ?
18. ರೈತರನ್ನು ಶೋಷಣೆ ಮಾಡಿದವರು ಯಾರು?
19. ಹುಲಿಯ ಗುಹೆಯಲ್ಲಿ ನಾಪಿತ ಏನನ್ನು ಕಂಡನು?

(ಇ) ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x3=6

20. ಬೆಟ್ಟದ ಮೇಲಿನ ದೇವತೆಯು ಬೋಳೆಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
21. ಬೋಳೆಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾಹ್ಕಾರಣ್ಣನು ಏನು ಹೇಳುತ್ತಾನೆ?
22. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
23. ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ?

### ಇ-ವಿಭಾಗ

III (ಅ) ಎರಡನ್ನು ಕುರಿತು ಸಂದರ್ಭ ಸೂಚಿಸಿ ವಿವರಿಸಿ. 3x2=6

24. ನೀಂ ಕ್ರಮ ವಿಪರ್ಯಂ ಮಾಡುವುದೇ
25. ಪಾಪದ ಕೊಡ ತುಂಬಿದ ಜಗಪ್ರಳಯ
26. ಧನವಿದ್ದರೂ ಇಂಧನ ಬೇಕಲ್ಲವೆ

(ಆ) ಒಂದನ್ನು ಕುರಿತು ಸಂದರ್ಭ ಸೂಚಿಸಿ ವಿವರಿಸಿ. 3x1=3

27. ಲೋ ಹುಡುಗ ಆ ಫೋಟೋ ಯಾರದಯ್ಯಾ
28. ಜೀತದ ಕೆಲಸ ಯಾರು ಮಾಡುತ್ತಾರೆ?

(ಇ) ಒಂದನ್ನು ಕುರಿತು ಸಂದರ್ಭ ಸೂಚಿಸಿ ವಿವರಿಸಿ. 3x1=3

29. ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು
30. ಚಿನ್ನ ತಿಂದು ಬದುಕಲಾಗುತ್ತ!

(ಪು.ತಿ.ನೋ.)

## ಈ - ವಿಭಾಗ

IV (ಅ) ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4x3=12

31. ಅಭಿಮನ್ಯುವಿನ ಶೌರ್ಯ ಸಾಹಸಗಳನ್ನು ದುರ್ಯೋಧನ ಹೇಗೆ ಹೊಗಳುತ್ತಾನೆ?
32. ಸೀತೆ ಕಲ್ಲುರಂ ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ.
33. ಕುವೆಂಪು ಅವರು 'ಕೂಗಾಟದ ರಾಜಕೀಯ ನಾಟಕ' ಎಂದು ಹೇಳಿರುವ ಹಿನ್ನೆಲೆ ಏನು?
34. ಕವಿಯ ಆತಂಕಕ್ಕೆ ಕಾರಣವಾದ ಸನ್ನಿವೇಶಗಳು 'ಮತ್ತೆ ಸೂರ್ಯ ಬರುತ್ತಾನೆ' ಎಂಬ ಕವಿತೆಯಲ್ಲಿ ಹೇಗೆ ಮೂಡಿ ಬಂದಿದೆ?

(ಆ) ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4x2=8

35. ಡಾ. ಸಿ.ಎಚ್. ಲಕ್ಷ್ಮಣಯ್ಯನವರ ರಾಗಿ ಸಂಶೋಧನೆ ಮತ್ತು ರಾಗಿ ಪ್ರೀತಿಯನ್ನು ವಿವರಿಸಿ.
36. ಶಾಸ್ತ್ರಿ ಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿ.
37. ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕಥೆ ಯಾವುದು?

(ಇ) ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 4x2=8

38. ಸೈತಾನನು ತನ್ನ ಪರಿಚಯ ಮಾಡಿಕೊಂಡ ಬಗೆ ಹಾಗೂ ಬಂದಂಥ ಕಾರಣವನ್ನು ತಿಳಿಸಿರಿ.
39. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.
40. 'ಹಸಿರೇ ಉಸಿರು' ಎಂಬುದನ್ನು ಚೋಳಿಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟ ಪಡಿಸಿದ್ದಾರೆ? ವಿಮರ್ಶಿಸಿರಿ.

## ಉ - ವಿಭಾಗ

V (ಅ) ಒಂದು ಪದ್ಯದ ಭಾವಾರ್ಥ ಬರೆಯಿರಿ. 5x1=5

41. ನೀನುಳ್ಳೊಡಮುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡಮುಂಟು ಪೀಟಿಗೆ
ನೀನಿಲ್ಲದವೆಲ್ಲಮೊಳವೆ ಅಂಗಾಧಿಪತೀ

42. ಏಕೆ ನಿಂದಪೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ
ಗೀ ಕಾದೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು
ಲೋಕದರಸೆಗೈದೊಡಂ ತನ್ನ ಕಿಂಕರ
ರ್ಬೇಕುಬೇಡೆಂದು ಪೇಳರೆ ಭರತ ಶತ್ರುಘ್ನ
ರೀ ಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ಲಳಬಲೆ

(ಆ) ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 2x6=12

43. ಪದಗಳ ಅರ್ಥ ಬರೆಯಿರಿ : ನರ, ಅಲರ್ಧ
44. ಬಿಡಿಸಿ ಬರೆಯಿರಿ : ಕಟ್ಟೋಗರ, ಕಣ್ಮಲರ್
45. ತದ್ಭವ ಬರೆಯಿರಿ : ಯಾತ್ರೆ, ರತ್ನ
46. ಗ್ರಾಂಥಿಕ ರೂಪ ಬರೆಯಿರಿ : ಬ್ಯಾಡಾರ, ಒತ್ಕೊಂಡು
47. ವಾಕ್ಯಗಳಲ್ಲಿ ಬಳಸಿ : ಅಡಿಪಾಯ, ಅಜಗಜಾಂತರ
48. ಎರಡು ಅನ್ಯ ದೇಶ್ಯ ಪದ ಬರೆಯಿರಿ.
49. ಸಮಾನಾರ್ಥಗಳನ್ನು ಬರೆಯಿರಿ : ದಿನಕರ, ಭೂಮಿ

(ಇ) ಒಂದನ್ನು ಕುರಿತು ಪ್ರಬಂಧ ಬರೆಯಿರಿ. 5x1=5

50. ಬರಗಾಲ
51. ಯೋಗಾಭ್ಯಾಸ

(ಈ) ಪತ್ರಲೇಖನ 4x1=4

52. ನೀವು ಸಾಧಿಸಬೇಕೆನ್ನುವ ಗುರಿಗಳನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.
53. ನಿಮ್ಮ ಊರಿನ ರಸ್ತೆ ದುರಸ್ತಿ ಬಗೆಗೆ ಸಂಬಂಧ ಪಟ್ಟ ಮೇಲಾಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ.

(ಉ) ಒಂದನ್ನು ವಿಸ್ತರಿಸಿ ಬರೆಯಿರಿ. 4x1=4

54. ಮಾಡಿದ್ದುಣ್ಣೋ ಮಹಾರಾಯ
55. ಆಳಾಗಬಲ್ಲವನು ಅರಸಾಗುವ